**ರಾಮಕೃಷ್ಣ ಮಿಷನ್ ಆಶ್ರಮ**

(ರಾಮಕೃಷ್ಣ ಮಿಷನ್, ಬೇಲೂರು ಮಠದ ಒಂದು ಶಾಖಾಕೇಂದ್ರ)

**ಸೆಕ್ಟರ್ 15-ಬಿ, ಮಧ್ಯ ಮಾರ್ಗ**

**ಚಂಡೀಗಢ -160 015**

ಫೋನ್: 0172 – 2549477

E-mail: rkmachandigarh@gmail.com

Website: www.rkmachandigarh.org




ನಿರ್ಮಿಸಲು ಉದ್ದೇಶಿಸಿರುವ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ **ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರ**

# ಒಂದು ವಿನಮ್ರ ವಿನಂತಿ

## ನೂತನ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರದ ನಿರ್ಮಾಣ

ಆತ್ಮೀಯ ಭಕ್ತಬಾಂಧವರೇ ಹಾಗೂ ಹಿತೈಷಿಗಳೆ,

ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮವು 1955ರಲ್ಲಿ ಸ್ಥಾಪಿತವಾಯಿತು. ಅಂದಿನಿಂದ ಚಂಡೀಗಢ ಆಶ್ರಮವು ಶಾಂತಿಯನ್ನರಸಿ ಬರುವವರಿಗೆ ಆಧ್ಯಾತ್ಮಿಕ ಪರಿಹಾರ, ನೆಮ್ಮದಿಯನ್ನು ನೀಡುತ್ತಾ ಬಂದಿದೆ; ಅದಲ್ಲದೆ ಉಚಿತ ವೈದ್ಯಕೀಯ ಸೇವೆ, ಕಾಲೇಜು ವಿದ್ಯಾರ್ಥಿಗಳಿಗಾಗಿ 'ವಿವೇಕಾನಂದ ಸ್ಟೂಡೆಂಟ್ಸ್ ಹೋಮ್' ಎಂಬ ವಿದ್ಯಾರ್ಥಿ ನಿಲಯ, ಶಾಲೆ-ಕಾಲೇಜುಗಳಿಗೆ ಮೌಲ್ಯಶಿಕ್ಷಣ ಕಾರ್ಯಕ್ರಮಗಳು, ಪ್ರೇರಣಾತ್ಮಕ ಹಾಗೂ ಉನ್ನತ ಮೌಲ್ಯಗಳನ್ನು ಹರಡುವ ಸಾಹಿತ್ಯದ ಪ್ರಸರಣ – ಇವೇ ಮೊದಲಾದ ಚಟುವಟಿಕೆಗಳನ್ನು ನಡೆಸುತ್ತಿದೆ.

ಕಳೆದ ಎರಡು ದಶಕಗಳಿಂದ ಈ ಸೇವಾಕಾರ್ಯಗಳು ಸುಸ್ಥಿರವಾಗಿ ವ್ಯಾಪಕಗೊಳ್ಳುತ್ತಿವೆ. ಆಶ್ರಮಕ್ಕೆ ಆಗಮಿಸುವ, ಇಲ್ಲಿನ ದೈನಂದಿನ ಚಟುವಟಿಕೆಗಳಾದ ಬೆಳಗಿನ ಮಂಗಳಾರತಿ, ಸಂಧ್ಯಾರತಿಗಳಲ್ಲಿ ಪಾಲ್ಗೊಳ್ಳುವ ಹಾಗೂ ಇಲ್ಲಿ ನಡೆಯುವ ಧ್ಯಾನ, ತರಬೇತಿ ಶಿಬಿರ, ಸತ್ಸಂಗ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಭಕ್ತರ ಸಂಖ್ಯೆ ಗಣನೀಯವಾಗಿ ವೃದ್ಧಿಗೊಂಡಿದೆ.

ಹೊಸ ಅಗತ್ಯಗಳಿಗೆ ಅನುಗುಣವಾಗಿ ಆಶ್ರಮದಲ್ಲಿ ಈ ಕೆಳಗಿನ ಹೊಸ ಕಟ್ಟಡಗಳ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ:

1) ವಿಶಾಲವಾದ ಧ್ಯಾನಮಂದಿರ ಹಾಗೂ ಸಾಧುನಿವಾಸ – 1.3 ಕೋಟಿ ರೂಪಾಯಿ ಅಂದಾಜು ವೆಚ್ಚ

2) ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರ – 2.1 ಕೋಟಿ ರೂಪಾಯಿ ಅಂದಾಜು ವೆಚ್ಚ

**ಈ ಯೋಜನೆಗೆ ತಗಲಬಹುದಾದ ಒಟ್ಟು ಮೊತ್ತ – 3.4 ಕೋಟಿ ರೂಪಾಯಿ ಅಂದಾಜು ವೆಚ್ಚ**



ರಾಮಕೃಷ್ಣ ಮಹಾಸಂಘದ 11ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಗಂಭೀರಾನಂದಜಿ ಮಹಾರಾಜ್ ಅವರು 1985ರ ನವಂಬರ್ 24ರಂದು 'ವಿಶ್ವಭಾವೈಕ್ಯ ಧ್ಯಾನಮಂದಿರ'ದ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸುತ್ತಿರುವುದು.



ನೂತನ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರದ ನಿರ್ಮಾಣಕಾರ್ಯ ಪ್ರಗತಿಯಲ್ಲಿರುವುದು.

ಈ ಕಾರ್ಯಕ್ಕೆ ದೇಣಿಗೆ ನೀಡಬಯಸುವವರು ಚೆಕ್, ಡಿಡಿ ಇವುಗಳನ್ನು '**RAMAKRISHNA MISSION ASHRAMA, CHANDIGARH**' ಹೆಸರಿನಲ್ಲಿ ತೆಗೆದು, ಆಶ್ರಮದ ವಿಳಾಸಕ್ಕೆ ಕೊರಿಯರ್, ತ್ವರಿತ ಅಂಚೆ (speed post) ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಬಹುದು. ನೇರವಾಗಿ ಬ್ಯಾಂಕಿಗೆ ಹಣ ವರ್ಗಾವಣೆ ಮಾಡುವವರಿಗೆ ಖಾತೆ ವಿವರಗಳು:

**1. ICICI A/c No. - 001301029198, Branch - Sector 15-C, Chandigarh, IFSC - ICIC0002429**

**2. IDBI A/c No. - 003104000083216, Branch - Sector 8-C, Chandigarh, IFSC - IBKL0000003**

(ದಯವಿಟ್ಟು ಹಣ ವರ್ಗಾವಣೆ ಮಾಡಿದ ವಿವರ, ನಿಮ್ಮ ವಿಳಾಸ, ಫೋನ್ ನಂ. ಇವುಗಳನ್ನು ಅದೇ ದಿನದಂದು ಇ-ಮೇಲ್ ಮೂಲಕ ನಮಗೆ ತಿಳಿಸಬೇಕಾಗಿ ವಿನಂತಿ)


*ಆಶ್ರಮದ ವಿಳಾಸ:*

**Ramakrishna Mission Ashrama, Sector 15-B, Madhya Marg, Chandigarh - 160015**

Tel: 0172-2549477 E-mail: rkmachandigarh@gmail.com


ಭಗವಾನ್ ಶ್ರೀರಾಮಕೃಷ್ಣರ ಸೇವೆಯಲ್ಲಿ

ಸ್ವಾಮಿ ಸತ್ಯೇಶಾನಂದ

ಕಾರ್ಯದರ್ಶಿಗಳು, ರಾಮಕೃಷ್ಣ ಮಿಷನ್ ಆಶ್ರಮ, ಚಂಡೀಗಢ

# ಗುರಪ್ ರಾಮಕೃಷ್ಣ ಮಿಷನ್ ಆಶ್ರಮ ಆರಂಭ






ಪಶ್ಚಿಮ ಬಂಗಾಳದ ಹುಗ್ಲಿ ಜಿಲ್ಲೆಯಲ್ಲಿರುವ ಗುರಪ್ ಎಂಬಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಶಾಖಾ ಕೇಂದ್ರವು ಆರಂಭವಾಯಿತು. ಈ ಹಿಂದೆ 'ಶ್ರೀರಾಮಕೃಷ್ಣ ಸೇವಾಶ್ರಮ' ಎಂಬ ಹೆಸರಿನಲ್ಲಿ ನಡೆಯುತ್ತಿದ್ದ ಖಾಸಗಿ ಕೇಂದ್ರವನ್ನು ಬಹುಜನರ ಬೇಡಿಕೆಯ ಮೇರೆಗೆ ರಾಮಕೃಷ್ಣ ಮಿಷನ್ನಿನ ಶಾಖಾ ಕೇಂದ್ರವನ್ನಾಗಿ ಸ್ವೀಕರಿಸಲು ಬೇಲೂರು ಮಠ (ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರ) ನಿರ್ಧರಿಸಿತು. ಸ್ವಾಮಿ ಆನಂದಮಯಾನಂದಜಿ ಮಹಾರಾಜ್ ಅವರು ಈ ಕೇಂದ್ರದ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದು, ಈಗಾಗಲೇ ಆಶ್ರಮದ ಚಟುವಟಿಕೆಗಳು ಆರಂಭವಾಗಿವೆ. ಬಡ ಕುಟುಂಬಗಳಿಗಾಗಿ ಉಚಿತ ಪ್ರಾಥಮಿಕ ಶಿಕ್ಷಣ, ಕಂಪ್ಯೂಟರ್ ತರಬೇತಿ ಕೇಂದ್ರ , ನೈತಿಕ ಹಾಗೂ ಮೌಲ್ಯಶಿಕ್ಷಣ ಅರಿವಿನ ಕಾರ್ಯಕ್ರಮಗಳು, ಉಚಿತ ವೈದ್ಯಕೀಯ ತಪಾಸಣೆ, ಬಡಜನತೆಗೆ ಬಟ್ಟೆಬರೆ ಹಾಗೂ ಇತರ ಅಗತ್ಯ ವಸ್ತುಗಳ ವಿತರಣೆ, ಚಳಿಗಾಲದಲ್ಲಿ ಕಂಬಳಿ ವಸ್ತ್ರ ವಿತರಣೆ, ಸಂತ್ರಸ್ತ ಜನರ ಪುನರ್ವಸತಿ ಕಾರ್ಯಕ್ರಮ ಹಾಗೂ ನೈಸರ್ಗಿಕ ವಿಪತ್ತುಗಳು ಎದುರಾದಾಗ ಪರಿಹಾರ ಕಾರ್ಯ, ಇನ್ನೂ ಮೊದಲಾದ ಚಟುಟಿಕೆಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ. 2016ರ ಫೆಬ್ರವರಿ 2 ರಂದು ನಡೆದ ಕಾರ್ಯಕ್ರಮದಲ್ಲಿ ಆಶ್ರಮವನ್ನು ಅಧಿಕೃತವಾಗಿ ಮಿಷನ್ನಿಗೆ ಹಸ್ತಾಂತರಿಸಲಾಯಿತು. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುಹಿತಾನಂದಜಿ ಮಹಾರಾಜ್ ಹಾಗೂ ಸಹ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿ ಮಹಾರಾಜ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಮೈಸೂರಿನಲ್ಲಿ 'ಸಂತ್ರಸ್ತ ಪರಿಹಾರ ಕಾರ್ಯ'

ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರವಾದ ಬೇಲೂರು ಮಠದ 'ಪರಿಹಾರ ಕಾರ್ಯವಿಭಾಗ'ದ ವತಿಯಿಂದ ನಡೆಸಲಾದ 'ಸಂತ್ರಸ್ತ ಪರಿಹಾರ ಕಾರ್ಯ'ವು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ನೇತೃತ್ವದಲ್ಲಿ ಮೈಸೂರು ಹಾಗೂ ಸುತ್ತಮುತ್ತಲಿನ ವಿವಿಧ ಪ್ರದೇಶಗಳಲ್ಲಿ ನಡೆಯಿತು. ಮೈಸೂರು ನಗರದ ಹಿಂದುಳಿದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡಕುಟುಂಬಗಳನ್ನು ಹಾಗೂ ಆರ್ಥಿಕವಾಗಿ ಹಿಂದುಳಿದ ಜನರನ್ನು ಗುರುತಿಸಿ, ಅವರಿಗೆ ವಸ್ತ್ರ ವಿತರಣೆ ಕಾರ್ಯವನ್ನು ಮಾಡಲಾಯಿತು. ಮೈಸೂರಿನ ಕುಂಬಾರಕೊಪ್ಪಲು, ಮಂಜುನಾಥಪುರ, ಸ್ವೀಪರ್ಸ್ ಕಾಲೋನಿ, ಗಾಯತ್ರಿಪುರಂ ಮೊದಲಾದೆಡೆ ಹಾಗೂ ಬಿಳಿಗಿರಿರಂಗನ ಬೆಟ್ಟ, ತೆಂಕಲಮೋಳೆ, ಕೆ.ಗುಡಿ, ಮೊದಲಾದ ಹಿಂದುಳಿದ ಪ್ರದೇಶಗಳಲ್ಲಿ ಒಟ್ಟು 2309 ಸ್ವೆಟರ್, 984 ಜಾಕೆಟ್, 1125 ಟಿ-ಶರ್ಟ್, 992 ಶರ್ಟ್, 1038 ಪ್ಯಾಂಟ್ ಇವುಗಳನ್ನು ವಿತರಿಸಲಾಯಿತು. ಒಟ್ಟು 2583 ಫಲಾನುಭವಿಗಳು ಇವುಗಳನ್ನು ಸ್ವೀಕರಿಸಿದರು. ಈ ಉತ್ತಮ ಗುಣಮಟ್ಟದ ಬಟ್ಟೆಬರೆಗಳನ್ನು ಐ.ಟಿ.ಸಿ. ಲಿಮಿಟೆಡ್ ಕಂಪೆನಿಯು ಪ್ರಾಯೋಜಿಸಿದ್ದು, ಬೇಲೂರು ಮಠದ ನಿರ್ದೇಶದನ್ವಯ ಇವುಗಳನ್ನು ವಿತರಿಸಲಾಯಿತು. ವಿವಿಧ ಪ್ರದೇಶಗಳಲ್ಲಿ ನಡದ ಸರಳ ಕಾರ್ಯಕ್ರಮದಲ್ಲಿ ಆಶ್ರಮದ ಸಂನ್ಯಾಸಿಗಳು, ಸ್ವಯಂಸೇವಕರು ಹಾಗೂ ಇತರರು ಪಾಲ್ಗೊಂಡಿದ್ದರು. ಫೆಬ್ರವರಿ 16 ರಿಂದ ಮಾರ್ಚ್ 7 ರ ತನಕ ಈ ಕಾರ್ಯಕ್ರಮಗಳು ನಡೆದವು.




